ಶಾದಿ ಮಹಲ್‌ಗಳ ನಿರ್ಮಾಣ

871 (1489) ಶ್ರೀ ಕಾಕಾಸಾಹೇಬ್ ಪಾಂಡುರಂಗ ಪಟೇಲ್ (ನಿಪ್ಪಾಣಿ) : ಮಾನ್ಯ ಹಜ್, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ನಿಪ್ಪಾಣಿ ವಿಧಾನಸಭಾ ಕ್ಷೇತ್ರದ ನಿಪ್ಪಾಣಿ, ಬೋರ್ ಗಾವ್, ಕೋಗನುಲ್ಲಿ, ಬೆಡ್ಡಿಹಾಳ್, ಕರಡಗ, ಕುನ್ನೂರು, ಮಂಗೂರ್, ಬೋಜ್, ಚಾಂದ್ ಶಿರವಾಡ ಗ್ರಾಮಗಳಲ್ಲಿ ಅಲ್ಪಸಂಖ್ಯಾತರ ಜನಸಂಖ್ಯೆ ಹೆಚ್ಚಾಗಿರುವ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಈ ಜನರ ಕಲ್ಯಾಣಕ್ಕೆ ಸಂಬಂಧಿತ ಯೋಜನೆಯಡಿ ಶಾದಿಮಹಲ್‌ಗಳ ನಿರ್ಮಾಣ ಮಾಡಲಾಗುವುದೇ?

ಇ) ಈ 9 ಗ್ರಾಮಗಳಿಗೆ ಶಾದಿಮಹಲ್ ನಿರ್ಮಾಣ ಮಾಡಲು ಯಾವಾಗ ಕ್ರಮ ಕೈಗೊಳ್ಳಲಾಗುವುದು;

ಈ) ಶಾದಿಮಹಲ್ ಯೋಜನೆಯಡಿ ನಿಪ್ಪಾಣಿ ವಿಧಾನಸಭಾ ಕ್ಷೇತ್ರಕ್ಕೆ ಈವರೆವಿಗೆ ಹಣ ಬಿಡುಗಡೆ ಮಾಡದಿರಲು ಕಾರಣಗಳೇನು?

ಪ್ರೊ. ಡಾ॥ ಮುಮ್ತಾಜ್ ಅಲಿ ಖಾನ್ (ಹಜ್, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು) :

ಅ) ಹೌದು.

ಆ) ಜನಸಂಖ್ಯೆ ಆಧಾರದ ಮೇಲೆ ಮತ್ತು ಅವಶ್ಯಕತೆ ಆಧಾರದ ಮೇಲೆ ಕೊಡಲಾಗುವುದು.

ಇ) ಈ ಕೆಳಕಂಡ 9 ಗ್ರಾಮಗಳಲ್ಲಿ ಶಾದಿಮಹಲ್‌ಗಳ ನಿರ್ಮಾಣದ ಬಗ್ಗೆ ವಿವರ ಒದಗಿಸಿದೆ :

ಕ್ರ.ಸಂ.	ಗ್ರಾಮದ ಹೆಸರು	ಕಾಮಗಾರಿಯ ಹಂತ
01	ನಿಪ್ಪಾಣಿ	ಜಮಾತುಲ್ ಮುಸ್ಲಿಮೀನ್ ಬಾಗ್ ಬಾನ್ ಮೊಹಲ್ಲಾ, ನಿಪ್ಪಾಣಿ ಈ ಸಂಸ್ಥೆಯವರು ಶಾದಿಮಹಲ್‌ನ ಅನುದಾನಕ್ಕಾಗಿ ಅರ್ಜಿಯನ್ನು ಸಲ್ಲಿಸಿದ್ದು, ಅರ್ಜಿಯನ್ನು ಪರಿಶೀಲಿಸಲಾಗಿ ಅರ್ಜಿದಾರರು ಸಂಬಂಧಿತ ದಾಖಲಾತಿ

		ಗಳನ್ನು ಸಲ್ಲಿಸಿರುವುದಿಲ್ಲ. ಸದರಿ ಸಂಸ್ಥೆಗೆ ಬೇಕಾಗಿರುವ ದಾಖಲಾತಿ ಗಳನ್ನು ಒದಗಿಸಲು ಕೋರಲಾಗಿದೆ. ದಾಖಲಾತಿಗಳು ಸ್ವೀಕೃತಿಯಾದ ನಂತರ ಕ್ರಮ ಕೈಗೊಳ್ಳಲಾಗುವುದು.
02	ಬೋರ್‌ಗಾವ್	ವಿದ್ಯಾಸಾಗರ ಅಲ್ಪಸಂಖ್ಯಾತರ ಶೈಕ್ಷಣಿಕ ಸಂಸ್ಥೆಗೆ ಶಾದಿಮಹಲ್ ನಿರ್ಮಾಣಕ್ಕೆ ರೂ.10.00 ಲಕ್ಷ ಬಿಡುಗಡೆ ಮಾಡ ಲಾಗಿದೆ. ಕಟ್ಟಡದ ಕೆಲಸ ಪ್ರಗತಿ ಯಲ್ಲಿದೆ.
03	ಕೋಗನಾಳ್	ಸುನ್ನತ್ ಜಮಾತ್ ಮಸ್ಜೀದ್, ಈ ಸಂಸ್ಥೆ ಶಾದಿಮಹಲ್ ಕಟ್ಟಡ ನಿರ್ಮಾಣಕ್ಕೆ ರೂ.2.50 ಲಕ್ಷ ಬಿಡುಗಡೆ ಮಾಡಲಾಗಿದೆ. ಕಟ್ಟಡದ ಕೆಲಸ ಪ್ರಾರಂಭಿಸಬೇಕಾಗಿದೆ.
04	ಬೆಡ್ಕಿಹಾಳ್	ಈ ಗ್ರಾಮದ ಯಾವುದೇ ಸಂಸ್ಥೆಯಿಂದ ಶಾದಿಮಹಲ್ ಪ್ರಸ್ತಾವನೆ ಬಂದಿರುವುದಿಲ್ಲ.
05	ಕರಡಗ	ಪಟೇಲ್ ಮೊಹಲ್ಲಾ ಮಸ್ಜೀದ್, ಈ ಸಂಸ್ಥೆಯ ವತಿಯಿಂದ ನಿರ್ಮಿಸಲಿರುವ ಶಾದಿಮಹಲ್‌ಗೆ ರೂ.5.00 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ. ಕಟ್ಟಡದ ಕೆಲಸ ಪ್ರಾರಂಭಿಸಬೇಕಾಗಿದೆ.
06	ಕುನ್ನೂರು	ಸುನ್ನತುಲ್ ಮುಸ್ಲೀಂ ಜಮಾತ್ ಈ ಸಂಸ್ಥೆಗೆ ಶಾದಿಮಹಲ್ ನಿರ್ಮಾಣಕ್ಕೆ ರೂ.10.00 ಲಕ್ಷ ಬಿಡುಗಡೆ ಮಾಡ ಲಾಗಿದೆ. ಕಟ್ಟಡದ ಕೆಲಸ ಪ್ರಾರಂಭಿಸ ಬೇಕಾಗಿದೆ.

07	ಮಂಗೂರ್	ಈ ಗ್ರಾಮದ ಯಾವುದೇ ಸಂಸ್ಥೆಯಿಂದ ಶಾದಿಮಹಲ್ ಪ್ರಸ್ತಾವನೆ ಬಂದಿರುವುದಿಲ್ಲ.
08	ಭೋಜ್	ಪೀರ್ ದಾವಲ್ ಮಲ್ಲಿಕಾ ದರ್ಗಾ ಈ ಸಂಸ್ಥೆಗೆ ರೂ.5.00 ಲಕ್ಷಗಳನ್ನು ಶಾದಿಮಹಲ್ ನಿರ್ಮಾಣಕ್ಕಾಗಿ ಬಿಡುಗಡೆ ಮಾಡಲಾಗಿದೆ. ಕೆಲಸ ಪ್ರಾರಂಭಿಸಬೇಕಾಗಿದೆ.
09	ಚಾಂದ್ ಶಿರವಾಡ್	ಶ್ರೀ ಪಾರ್ಶ್ವನಾಥ ದಿಗಂಬರ ಜೈನ್ ಮಂದಿರ ಈ ಸಂಸ್ಥೆ ವತಿಯಿಂದ ಶಾದಿ ಮಹಲ್ ನಿರ್ಮಾಣಕ್ಕೆ ರೂ.5.00 ಲಕ್ಷ ಬಿಡುಗಡೆ ಮಾಡಲಾಗಿದೆ. ಕಟ್ಟಡದ ಕಾಮಗಾರಿ ಪೂರ್ಣ ಗೊಂಡಿದೆ.

ಈ) ಅನುದಾನದ ಲಭ್ಯತೆ ಹಾಗೂ ಸರಿಯಾದ ದಾಖಲಾತಿಗಳನ್ವಯ ಹಣ ಬಿಡುಗಡೆ ಮಾಡಲಾಗಿದೆ.

ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಪ್ರಾರಂಭಿಸುವುದು

872 (600) ಶ್ರೀ ಕರಡಿ ಸಂಗಣ್ಣ ಅಮರಪ್ಪ (ಕೊಪ್ಪಳ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೊಪ್ಪಳ ತಾಲ್ಲೂಕಿನ ಕಾತರಗಿ ಗುಡ್ಲಾನೂರು ಮತ್ತು ಹುಲಗಿ ಗ್ರಾಮಗಳಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಪ್ರಾರಂಭಿಸಲು ಪ್ರಸ್ತಾವನೆಯು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ ಪ್ರಸಕ್ತ ಸಾಲಿನಲ್ಲಿಯೇ ಪ್ರಾರಂಭಿಸಲಾಗುವುದೇ?

ಶ್ರೀ ಬಿ. ಶ್ರೀರಾಮುಲು (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

ಅ) ಬಂದಿದೆ.

ಆ) ಕೊಪ್ಪಳ ತಾಲ್ಲೂಕಿನ ಗ್ರಾಮೀಣ ಜನಸಂಖ್ಯೆಯು 2001 ರ ಜನಗಣತಿ ಪ್ರಕಾರ 2,49,640 ಇದ್ದು, ಮಾರ್ಗಸೂಚಿಗಳ ಪ್ರಕಾರ 8